**ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ ಅರಕಲಗೂಡು**

**ಸಿ.ಸಿ.ನಂಃ 257/2018**
**ದಿಃ 03/11/2018**

ಪಿರ್ಯಾದಿ ಃ- ಶಾಂತ ಕೋಂ ಕೃಷ್ಣೇಗೌಡ,
ಸುಮಾರು 50 ವರ್ಷ, ಅಂಕನಾಯಕನಹಳ್ಳಿ ಗ್ರಾಮ,
ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು.

ಃಃ ವಿರುದ್ಧ ಃಃ

ಆರೋಪಿ ಃ- ಪುಟ್ಟರಾಜು ಬಿನ್ ತಿಮ್ಮರಾಯೀಗೌಡ

ಆಪಾದನೆ

ಶ್ರೀ ಯೋಗೇಶ ಎಂ.ಎ ಎಲ್.ಎಲ್‌ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅರಕಲಗೂಡು ಆದ ನಾನು, ಆರೋಪಿಯಾದ

ಪುಟ್ಟರಾಜು ಬಿನ್ ತಿಮ್ಮರಾಯೀಗೌಡ
ಸುಮಾರು 32 ವರ್ಷ,
ಉಪ್ಪಾರ ಬೀದಿ, ಬ್ರಾಹ್ಮಣರ ಬೀದಿ ಪಕ್ಕ,
ಕೋಟೆ ಅರಕಲಗೂಡು ಟೌನ್ ,
ಅರಕಲಗೂಡು ತಾಲ್ಲೂಕು ,

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂಃ 3,00,000-00(ರೂಪಾಯಿ ಮೂರು ಲಕ್ಷ ಮಾತ್ರ) ಗಳನ್ನು ತನ್ನ ದರದ್ದು ನಿಮಿತ್ತ ಕೈ ಸಾಲವನ್ನು ತೀರಿಸಲು ಹಾಗೂ ಗೃಹ ಕೃತ್ಯದ ಕೆಲಸ ಕಾರ್ಯಗಳಿಗಾಗಿ ನಗದಾಗಿ ಸಾಲವನ್ನು ಪಡೆದುಕೊಂಡಿದ್ದು, ಖಾತರಿಗಾಗಿ ನೀವು ನಿಮ್ಮ ಬ್ಯಾಂಕ್ ಖಾತೆಯುಳ್ಳ ಕಾರ್ಪೊರೇಷನ್ ಬ್ಯಾಂಕ್, ಗೊರೂರು ಶಾಖೆಯ ಚೆಕ್ ಸಂಖ್ಯೆ 015084 ರ ಚೆಕ್‌ನ್ನು ನೀಡಿ ದಿನಾಂಕಃ 19/01/2018 ರ ದಿನಾಂಕವನ್ನು ನಮೂದಿಸಿರುತ್ತೀರಿ.

ನಂತರ ಸದರಿ ಚೆಕ್ಕಿನಲ್ಲಿ ನಮೂದಿಸಿದ ಮೊತ್ತವನ್ನು ನಗಧಿಕರಿಸುವಂತೆ ಪಿರ್ಯಾದೂರರಿಗೆ ತಿಳಿಸಿದ್ದು ಅದರಂತೆ ಪಿರ್ಯಾದುದಾರರು ಚೆಕ್ಕಿನ ಮೊತ್ತವನ್ನು ನಗಧಿಕರಿಸುವ ಸಲುವಾಗಿ

ಬ್ಯಾಂಕಿನಲ್ಲಿ ಚೆಕ್ಕನ್ನು ಪಿರ್ಯಾದಿದಾರರು ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಆ ಚೆಕ್‌ನ್ನು ವಾಪಸ್ಸು ನೀಡಿದ್ದು,

ನಂತರ ಈ ಬಗ್ಗೆ ಪಿರ್ಯಾದುದಾರರು ನಿಮ್ಮಲ್ಲಿ ಸದರಿ ಚೆಕ್ಕಿನ ಮೊತ್ತವನ್ನು ಮರುಪಾವತಿ ಮಾಡುವಂತೆ ಪಿರ್ಯಾದುದಾರರು ವಕೀಲರ ಮೂಲಕ ದಿನಾಂಕಃ 17/02/2018 ರಂದು ನೋಟೀಸ್‌ನ್ನು ಸಹ ನಿಮಗೆ ಕಳುಹಿಸಿದ್ದು, ನೋಟೀಸ್ ಆರೋಪಿಗೆ ಖುದ್ದು ಜಾರಿಯಾಗಿದ್ದು, ಪಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ಮೇಲೆ ವರ್ಗವಣೇಯ ಲಿಖಿತಗಳ ಅಧಿನಿಯಮ ಕಲಂ 138 ಮತ್ತು 142 ರ ಅನ್ವಯ ಆಪಾದನೆ ಇದೆ .

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು

**ಪ್ರ-1.** ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ -

**ಪ್ರ-2.** ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆಗೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆಗೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು